ಓ.ಎಸ್.ನಂಃ 92/2024
ಪಿ.ಡಬ್ಲ್ಯೂಃ 1

<u>ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-</u>

ನನ್ನ ತಾಯಿ ಹಾಗೂ ಹೆಚ್.ಡಿ.ಕುಮಾರಸ್ವಾಮಿರವರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತು. ನಾನು ದಾವಾ ಆಸ್ತಿಯ ಬಾಬ್ತು ನಕ್ಷೆಯನ್ನು ನೋಡಿರುತ್ತೇನೆ. ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಕ್ಷೆಗೆ ತಾಳೆ ನೋಡಿ ಖರೀದಿಸಿರುತ್ತಾರೋ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಆ ಸಮಯದಲ್ಲಿ ಸರ್ವೆ ಆಗದೇ ಇದ್ದ ಕಾರಣ ತಾಳೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಅದಕ್ಕೆ ತಾಗಿಕೊಂಡ ಆಸ್ತಿಯಲ್ಲಿ ಬೇಲಿ ಇರಲಿಲ್ಲ. ಈಗಲೂ ಸಹಿತ ದಾವಾ ಆಸ್ತಿಗೆ ತಾಗಿಕೊಂಡ ಆಸ್ತಿಗೆ ಬೇಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಸರ್ವೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಾನು ಸರ್ವೆ ಪ್ರೊಸೀಡಿಂಗ್ಸ್ ಅನ್ನು ಖುದ್ದಾಗಿ ನೋಡಿರುತ್ತೇನೆ. ಸರ್ವೆ ನೋಟೀಸ್ ಅನ್ನು ದಾವಾ ಆಸ್ತಿಯ ಅಕ್ಕಪಕ್ಕದ ಜಮೀನುದಾರರಿಗೆ ನೀಡಲಾಗಿರುತ್ತದೆ.

ಸರ್ವೇಯರ್ ಮಹಜರ್ ಅನ್ನು ತಯಾರಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೇಯರ್ ಬಂದ ಸಮಯದಲ್ಲಿ ಓಂಕಾರ್ ಮೂರ್ತಿ ಎನ್ನುವವರು ಹಾಜರಿದ್ದರು. ದಾವಾ ಆಸ್ತಿಯ ಉತ್ತರದ ದಿಕ್ಕಿಗೆ ಪ್ರತಿವಾದಿಯ ಆಸ್ತಿ ಇರುತ್ತದೆ. ಸರ್ವೇಯರ್ ಸದರಿ ದಿನ ಸರ್ವೆ ಕಲ್ಲನ್ನು ಇಟ್ಟಿರುವ ಬಗ್ಗೆ ನಾನು ನೋಡಿರುವುದಿಲ್ಲ. ಸದರಿ ದಿನ ಸರ್ವೇಯರ್ ವಿಲೇಜ್ ಮ್ಯಾಪ್ ಅನ್ನು ಪರಿಶೀಲಿಸಿರುತ್ತಾರೆ. ಸರ್ವೇಯರ್ Encroachment ನ

ಬಾಬ್ತು ನಕ್ಷೆಯಲ್ಲಿ ತೋರಿಸಿರುತ್ತಾರೋ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಸರ್ವೇಯರ್ ಹೇಳಿದ್ದರು, ಆದರೆ, ತೋರಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

2008 ರಲ್ಲಿ ಸುಬ್ಬರಾವ್ ರವರು ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ನನ್ನ ತಾಯಿ ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನನಗೆ ಈ ಬಗ್ಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯನ್ನು 2008 ರಲ್ಲಿ ಪೋಡಿ ಮಾಡಲಾಗಿದ್ದು ಸದರಿ ಹದ್ದುಬಸ್ತಿನ ಒಳಗೆ ಪ್ರತಿವಾದಿಯು ತನ್ನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯ ಜಾಗದ ಒಳಗೆ ದೇವಸ್ಥಾನವನ್ನು ಕಟ್ಟಲಾಗಿರುತ್ತದೆ ಎಂದರೆ ಸರಿ. ಅದರ ನಂತರ ಪ್ರತಿವಾದಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವುದೇ Encroachment ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ